ಎಂ.ವಿ.ಸಿ ನಂ.465/2024
ಪಿ.ಡಬ್ಲ್ಯೂಃ 1

ದಿನಾಂಕಃ 13-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ- 2 ನೇ ಎದುರುದಾರರ ಪರ ವಕೀಲರಿಂದಃ-

ನನಗೆ ಈಗ 60 ವರ್ಷ ವಯಸ್ಸು ಇರುತ್ತದೆ. ಅಪಘಾತ ಸಮಯದಲ್ಲಿ ನನ್ನ ಗಂಡನಿಗೆ 63 ವರ್ಷ ವಯಸ್ಸು ಆಗಿತ್ತು. ಅಪಘಾತ ಸಮಯದಲ್ಲಿ ನಾನು ಅವರ ಜೊತೆಗೆ ಇರಲಿಲ್ಲ. ನನ್ನ ಗಂಡ ಸದರಿ ದಿನ ಕಳಸಾಪುರದಿಂದ ಬರುತ್ತಿದ್ದರು. ನನ್ನ ಗಂಡ ಹೋಗುತ್ತಿದ್ದ ಮೊಟಾರ್ ಸೈಕಲ್ ಟಿ.ವಿ.ಎಸ್ ಮೊಪೆಡ್ ಎಂದರೆ ಸರಿ. ನನ್ನ ಗಂಡನಿಗೆ ಚಾಲನಾ ಪತ್ರ ಇರಲಿಲ್ಲ ಎಂದರೆ ಸರಿ. ಸದರಿ ಅಪಘಾತ ಯಾವ ರೀತಿ ಆಯಿತು ಎಂದು ನನಗೆ ಖುದ್ದಾಗಿ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಅಪಘಾತದ ಬಗ್ಗೆ ನನಗೆ ಆಸ್ಪತ್ರೆಗೆ ಬಂದವರು ತಿಳಿಸಿರುತ್ತಾರೆ. ಸದರಿ ಅಪಘಾತವು ಟ್ರ್ಯಾಕ್ಟರ್ ಹಾಗೂ ಬೈಕ್ ಮುಖಾಮುಖಿಯಾಗಿರುತ್ತದೆ ಎಂದರೆ ಸರಿ. ಸದರಿ ಅಪಘಾತವು ಟ್ರ್ಯಾಕ್ಟರ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಟ್ರ್ಯಾಕ್ಟರ್ ನಿಧಾನಕ್ಕೆ ಬಂದಿದ್ದು ನನ್ನ ಗಂಡನೇ ರಸ್ತೆಯ ಮಧ್ಯ ಭಾಗಕ್ಕೆ ಹೋಗಿ ಟ್ರ್ಯಾಕ್ಟರ್ ಗೆ ಡಿಕ್ಕಿಪಡಿಸಿ ಅಪಘಾತ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ನನಗೆ 3 ಜನ ಮಕ್ಕಳು. ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು ಇರುತ್ತಾಳೆ. ಅವರಿಗೆ ಮದುವೆಯಾಗಿರುತ್ತದೆ. ನನ್ನ ಗಂಡ ನಮ್ಮ ಮಕ್ಕಳ ಆದಾಯದ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಆದಾಯ ಇದ್ದ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ

ಎಂದರೆ ಸರಿ. ವ್ಯವಸಾಯ ಜಮೀನು ಇದ್ದ ಬಗ್ಗೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಗಂಡನಿಗೆ ತಿಂಗಳಿಗೆ 30 ಸಾವಿರ ಆದಾಯ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ 2 ನೇ ಎದುರುದಾರರು ಪರಿಹಾರವನ್ನು ನೀಡಲು ಭಾದಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಟ್ರ್ಯಾಕ್ಟರ್ ಮೇಲೆ ನಾವು ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ಚಾಲಕನಿಗೆ ಚಾಲನಾ ಪತ್ರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ:ಹೇ:ಕೇ:ಸ:ಇ:ಎ:ಒ:

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.

ಎಸ್ಆರ್:

ಎಂ.ವಿ.ಸಿ ನಂ.465/2024
ಪಿ.ಡಬ್ಲ್ಯೂಃ 1